**1 ನೇ ಅಧಿಕ ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. 1 ನೇ ನ್ಯಾಯಾಲಯ ಗದಗ**

**ಸಿ.ಸಿ. ಸಂ: 1287/23**

**ಸಿ.ಡಬ್ಲ್ಯೂ.1**
**ಪಿ.ಡಬ್ಲ್ಯೂ.3**

**ಸಾಕ್ಷಿಯ ಹೆಸರು :- ಶಹನಾಜ ಬೇಗಂ**
**ತಂದೆಯ ಹೆಸರು :- ವಾಯ.ಕೆ.ವಡಗೇರಿ**
**ವಯಸ್ಸು :- 32 ವರ್ಷಗಳು**
**ಉದ್ಯೋಗ :- ಅಬಕಾರಿ ನಿರೀಕ್ಷಕರು**
**ವಾಸ ಸ್ಥಳ :- ಹೊಸಪೇಟೆ ವಲಯ**

**ದಿನಾಂಕ: 26-09-2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು:-**

**ಸರ್ಕಾರಿ ಪರ ಅಭಿಯೋಜಕರಿಂದ ಸಾಕ್ಷಿಯ ಮುಖ್ಯ ವಿಚಾರಣೆ :-**

ನಾನು ದಿಃ24-09-2020 ರಿಂದ 04-09-2023 ರವರೆಗೆ ಅಬಕಾರಿ ನಿರೀಕ್ಷಕರಾಗಿ ಅಬಕಾರಿ ಉಪಆಯುಕ್ತರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ25-04-2023 ರಂದು ವಿಧಾನಸಭಾ ಚುನಾವಣೆ ನಿಮಿತ್ಯ ನೀತಿಸಂಹಿತೆ ಜಾರಿಯಲ್ಲಿದ್ದಾಗ ಮೇಲಾಧಿಕಾರಿಗಳ ಆದೇಶದ ಮೇರೆಗೆ ಅಪರಾಧ ಪತ್ತೆ ಹಚ್ಚುವ ನಿಟ್ಟಿನಲ್ಲಿ ಮುಂಜಾನೆ 11-30 ಗಂಟೆ ಸುಮಾರಿಗೆ ಸಿಬ್ಬಂದಿಗಳಾದ ಚಾಸಾ 4, 5 ರವರೊಂದಿಗೆ ಕೂಡಿ ಸರ್ಕಾರಿ ವಾಹನ ನಂ. ಕೆಎ-26-ಜಿ-0391 ನೇದ್ದಲ್ಲಿ ಗದಗ ಬೆಟಗೇರಿಯಲ್ಲಿ ಗಸ್ತು ಮಾಡುತ್ತಿರುವಾಗ ಬೆಳಗ್ಗೆ 11-45-ಗಂಟೆಗೆ ಬಾತ್ಮಿ ಬಂದಿದ್ದು, ಗಂಗಾಪೂರ ಪೇಟೆಯಲ್ಲಿ 1 ನೇ ಆರೋಪಿ ಸಂದೀಪ ಶಿವಾನಂದ ಚಿನ್ನೂರ ಎಂಬುವವನು ಅಕ್ರಮವಾಗಿ ತನ್ನ ದ್ವಿಚಕ್ರ ವಾಹನದಲ್ಲಿ ಮದ್ಯ ಸಾಗಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದ ಮೇರೆಗೆ ಗಾಂಧಿ ನಗರ ಬಸ್ಸ ನಿಲ್ದಾಣದ ಹತ್ತಿರ ನಿಂತಿದ್ದ ಚಾಸಾ 2, 3 ಇಬ್ಬರು ಪಂಚರನ್ನು ಕರೆಸಿ, ಅವರಿಗೆ ಬಾತ್ಮಿ ಸಂಗತಿ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದಾಗ ಸದರಿಯವರು ಒಪ್ಪಿ, ಸದರಿಯವರಿಗೆ ಪಂಚರ ನೋಟಿಸು ನೀಡಲಾಯಿತು. ಪಂಚರೊಂದಿಗೆ ಸೇರಿಕೊಂಡು ಬಾತ್ಮಿ ಬಂದ ಸ್ಥಳವಾದ ಗಂಗಾಪೂರ ಪೇಟೆ ಬಸ್ಸ ನಿಲ್ದಾಣದ ಹತ್ತಿರ 12-00 ಗಂಟೆಗೆ ರಸ್ತೆ ಗಾವಲು ನಿರ್ವಹಿಸುತ್ತಿರುವಾಗ ಗಂಗಾಪೂರ ಪೇಟೆಯಿಂದ ಒಂದು ದ್ವಿಚಕ್ರವಾಹನ ನಮ್ಮ ಹತ್ತಿರ ಬರುತ್ತಿದ್ದು ಸದರಿ ವಾಹನ ತಡೆದು ನಿಲ್ಲಿಸಲು ಪ್ರಯತ್ನಿಸುತ್ತಿದ್ದಂತೆ ವಾಹನ ಚಾಲಕನು ಓಡಲು ಪ್ರಯತ್ನಿಸುತ್ತಿರುವಾಗ ಅವನನ್ನು ಸಿಬ್ಬ್ಮದಿಯವರು ಹಿಡಿದು ತಡೆದು ನೀಲ್ಲಿಸಿದರು. ಸದರಿ ವಾಹನ ತಪಾಸಣೆ ಮಾಡುವ ಅವಶ್ಯಕತೆ ಕಂಡುಬಂದಿದ್ದರಿಂದ ಸ್ಥಳದಲ್ಲಿ ಪಂಚರ ಸಮಕ್ಷಮ ಶೋಧನಾ ಸಮುಚ್ಚಿತ ಆಧಾರ ತಯಾರಿಸಿಕೊಂಡು ಸದರಿ ವಾಹನ ತಪಾಸಣೆ ಮಾಡಲು ಪ್ರಾರಂಬಿಸಿದಾಗ ಸದರಿ ವಾಹನದಲ್ಲಿ 1-ಗೊಬ್ಬರ ಚೀಲ ಇತ್ತು ಅದನ್ನು ತೆಗೆದು ನೋಡಿದಾಗ ಅದರಲ್ಲಿ 90 ಎಂ ಎಲ್ ನ 5- ಹೈ ವರ್ಡ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಹಾಗೂ 90 ಎಂಎಲ್ ನ ಓರಿಜನಲ್ ಚಾಯ್ಸ 50 ಮದ್ಯದ

ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡು ಬಂದಿತು. ಸದರಿ ದ್ವಿಚಕ್ರ ವಾಹನದ ನಂಬರ ನಮೂದು ಇಲ್ಲದ ಕಾರಣ ಬಜಾಜ ಕಂಪನಿಯ ಅವತಾರ ದ್ವಿಚಕ್ರ ವಾಹನ ಆಗಿದ್ದು ಸ್ಥಳದಲ್ಲಿ ವಾಹನ ಹಾಗೂ ಮುದ್ದೆ ಮಾಲನ್ನು ವಶಪಡಿಸಿಕೊಂಡು ಆ ರೋಪಿಯನ್ನು ದಸ್ತಗಿರಿ ಗೊಚಿಸಿ ಸ್ಥಳದಲ್ಲಿ ಮಾದರಿಗಾಗಿ ಜಪ್ತ ಪಡಿಸಿಕೊಂಡ ಎಲ್ಲಾ ಮದ್ಯವನ್ನು ರಸಾಯನ ಪರೀಕ್ಷೆಗಾಗಿ ಸದರಿ ಗೊಬ್ಬರ ಚೀಲದಿಂದ ಮಾದರಿ ತೆಗೆದು ದಾರ ಕಟ್ಟಿ ಅರಗ ಕಟ್ಟಿ ಸರ್ಕಾರಿ ಸೀಲ್ ನಿಂದ ಸೀಲ್ ಮಾಡಿ, ಸ್ಥಳದಲ್ಲಿ ಮಾದರಿ ಚೀಟಿ ಹಾಗೂ ಮಾದರಿ ಮೊಹರಿನ ಚೀಟಿ ತಯಾರಿಸಿ ಪಂಚರ ಹಾಗೂ ನಮ್ಮಗಳ ಸಹಿ ಪಡೆದು ಸದರಿ ಮುದ್ದೆ ಮಾಲಿಗೆ ಅಂಟಿಸಲಾಗಿಯಿತು. ಸ್ಥಳದಲ್ಲಿ ವಿವರವಾದ ಪಂಚನಾಮೆಯನ್ನು ಮಧಾಹ್ನ 12-30 ರಿಂದ 1-30 ಗಂಟೆಯ ವರೆಗೆ ಮಾಡಲಾಯಿತು. ಕಚೇರಿಗೆ ಬಂದು ಆರೋಪಿಯ ವಿರುದ್ಧ ಗಣಕೀಕೃತ ದೂರನ್ನು ತಯಾರಿಸಿ, ಆರೋಪಿಯ ವಿರುದ್ಧ ಪ್ರವವ ವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಲಾಯಿತು. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ, ದಸ್ತಗಿರಿ ನಿಯಮ ಪಾಲಿಸಿ, ದಸ್ತಗಿರಿ ಮಾಡಿದ ಆರೋಪಿತನನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಸಾಕ್ಷಿದಾರರು ಶೋಧನಾ ಸಮುಚ್ಚಿತ ಆಧಾರದ ಮೇಲೆ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 3 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿಃ 3(ಎ) ಎಂದು, ಸಾಕ್ಷಿದಾರರು ಚಾಸಾ 2, 3 ರವರಿಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 4 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿಃ 4(ಎ) ಎಂದು, ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿಃ 1 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನಿಪಿಃ 1(ಸಿ) ಎಂದು, ಸಾಕ್ಷಿದಾರರು ಮಾದರಿ ಮೊಹರ ಚೀಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನಿಪಿಃ 2(ಸಿ) ಎಂದು, ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 5 ಎಂದು, ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನಿಪಿಃ5(ಎ) ಎಂದು, ಸಾಕ್ಷಿದಾರರು ಪ್ರ ವವ ನೋಡಿ ಗುರುತಿಸಿದ್ದು ಅದನ್ನು ನಿಪಿಃ 6 ಎಂದು, ಅದರ ಮೇಲೆ ಇರುವ ಸಾಕ್ಷಿದಾರರ 2- ಸಹಿಗಳನ್ನು ನಿಪಿಃ6(ಎ) (ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಜಪ್ತ ಮಾಡಿ, ಸ್ಯಾಂಪಲ್ ಗಾಗಿ ತೆಗೆದ ಟೆಟ್ರಾ ಪ್ಯಾಕೆಟ್‌ಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾರೆ ಮು ಮಾ 1 ಎಂದು ಗುರುತಿಸಲಾಯಿತು. ಟೆಟ್ರಾ ಪ್ಯಾಕೆಟ್ ಗಳ ಮೇಲೆ ಅಂಟಿಸಿದ ಚೀಟಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ನಿಪಿಃ 7 ಎಂದು ಅದರ ಮೇಲಿನ ಸಹಿಯನ್ನು ನಿಪಿಃ7(ಎ) ಎಂದು ಗುರುತಿಸಲಾಯಿತು. ಬಂಧನ ತಿಳುವಳಿಕೆ ಪತ್ರದ ನೋಡಿ ಗುರುತಿಸಿದ್ದು ಅದನ್ನು ನಿಪಿಃ 8 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನಿಪಿಃ 8(ಎ) ಎಂದು, ಸಾಕ್ಷಿದಾರರು ರಿಮಾಂಡ್ ಯಾದಿ ನೋಡಿ ಗುರುತಿಸಿದ್ದು ಅದನ್ನು ನಿಪಿಃ9 ಎಂದು, ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನಿಪಿಃ 9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 2 ನೇ ಆರೋಪಿ ಪರ ಶ್ರೀ ಟಿ ಎನ್ ಬಿ ವಕೀಲರಿಂ ದ**

ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಸಾರ್ವತ್ರಿಕ ಚೆಕ್ ಪೋಸ್ಟಗಳು ಇರುತ್ತವೆ ಎಂದರೆ ಸರಿ. ದಿಃ 25-04-2023 ರಂದು ಗಸ್ತ ಕರ್ತವ್ಯಕ್ಕೆ ಹೋಗಿದ್ದು ಚಲನ ವಲನ ಡೈರಿಯಲ್ಲಿ ನಮೂದು ಇರುತ್ತದೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಮೇಲೆ ಹೇಳಿದಂತೆ ಯಾವುದೇ ಗಸ್ತು ಕರ್ತವ್ಯಕ್ಕೆ ಹೋಗದೇ ಇರುವುದರಿಂದ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕದಂದು ಗಸ್ತು ಕರ್ತವ್ಯಕ್ಕೆ ಒಟ್ಟು 4-ಜನ ಹೋಗಿದ್ದೆವು. ಘಟನಾ ಜಾಗೆಯು ಸಾಕಷ್ಟು ಮನೆಗಳು ಇರುವ ಸ್ಥಳ ಇರುತ್ತದೆ ಎಂದರೆ ಸರಿ. ಸದರಿ ದಿನ ನಾವು ಅಂದಾಜು 3-4 ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ. ಸದರಿ ವಾಹನಗಳು ದ್ವಿಚಕ್ರ ವಾಹನಗಳು ಇದ್ದು, ಅವುಗಳ ಕಂಪನಿ ನನಗೆ ನೆನಪಿಲ್ಲ. ಸದರಿ ದಿನ ಸ್ಥಳದಲ್ಲಿ 2 ರಿಂದ 3 ತಾಲು ನಿಂತಿರುತ್ತೇವೆ.

ವಾಹನ ತಪಾಸಣೆ ಮಾಡಿದಾಗ ಆರೋಪಿಗೆ ಶೋಧನಾ ತಿಳುವಳಿಕೆ ಕೊಟ್ಟಿರುವುದಿಲ್ಲ. ಘಟನಾ ಸ್ಥಳದ ಸ್ಥಳೀಯರನ್ನು ಪಂಚರಾಗಲು ಕೇಳಿರುತ್ತೇವೆ, ಅವರು ಸಹಕರಿಸಿರುವುದಿಲ್ಲ. ನಾನು ಸ್ಮಾರ್ಟ ಫೋನ್ ಉಪಯೋಗಿಸುತ್ತೇನೆ. ಸದರಿ ದಿನ ನಡೆದ ಘಟನೆಯ ಕುರಿತು ವಿಡಿಯೋ ಚಿತ್ರಿಕರಣ ಹಾಗೂ ಫೋಟೋ ತೆಗೆದಿರುವುದಿಲ್ಲ ಎಂದರೆ ಸಾಕ್ಷಿದಾರರು ಆರೋಪಿ ಓಡಿ ಹೋಗುವ ಸಂಭವ ಇರುವುದರಿಂದ ವಿಡಿಯೋ ಚಿತ್ರಿಕರಣ ಹಾಗೂ ಫೋಟೋ ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಹಿಡಿದ ನಂತರ ವಿಡಿಯೋ ಚಿತ್ರಿಕರಣ ಹಾಗೂ ಫೋಟೋ ತೆಗೆದಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕಾರ ವಿಡಿಯೋ ಚಿತ್ರಿಕರಣ ಹಾಗೂ ಫೋಟೋ ತೆಗೆಯಲು ನನಗೆ ಯಾವುದೇ ತೊಂದರೆ ಇರುವುದಿಲ್ಲ .

ಸದರಿ ದಿನ ಆರೋಪಿ ಯಾವ ಬಣ್ಣದ ಬಟ್ಟೆ ಹಾಕಿದ್ದನೆಂದು ನೆನಗೆ ನೆನಪಿಲ್ಲ . ಜಪ್ತ ಮಾಡಿದ ಮುದ್ದೆ ಮಾಲುಗಳ ಜಪ್ತ ಯಾದಿ ನೀಡಿರುತ್ತೀರಾ ಎಂದರೆ ಸಾಕ್ಷಿದಾರರು ಜಪ್ತ ಯಾದಿ ಮಾಡಿರುತ್ತೇನೆ, ಆದರೆ ಆರೋಪಿಗೆ ನೀಡಿರುವುದಿಲ್ಲ. ಸದರಿ ಜಪ್ತ ಯಾದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಜಪ್ತ ಯಾದಿಯನ್ನು ನಾನು ತನಿಹಾಧಿಕಾರಿಗೆ ಕೊಟ್ಟಿರುತ್ತೇನೆ. ನಾನು ಜಪ್ತ ಯಾದಿ ತಯಾರಿಸದೇ ಇರುವುದರಿಂದ

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ಮುದ್ದೆ ಮಾಲಿಗೂ, ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ . ಚುನಾವಣಾ ಸಂಹಿತೆ ಯಲ್ಲಿ ಹೆಚ್ಚಿಗೆ ಕೆಲಸ ಮಾಡಿರುತ್ತೇನೆಂದು ತೋರಿಸಲು ಎಲ್ಲಾ ದಾಖಲೆಗಳನ್ನು ಸೃಷ್ಟಿಪಡಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಹಾಗೂ ಸದರಿ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಐ ಎ ಬಿ ವಕೀಲರಿಂದ**

ರೈಡ್ ಮಾಡುವ ಮುಂಚೆ ಸಂಬಂಧಿಸಿದ ನ್ಯಾಯಾಲಯದಿಂದ ಅನುಮತಿ ಪಡೆದಿರುವುದಿಲ್ಲ ಎಂದರೆ ಸಾಕ್ಷಿದಾರರು ಸಮಯ ಕಡಿಮೆ ಇರುವುದರಿಂದ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಕಲಂ 53, 54 ಅಬಕಾರಿ ಕಾಯಿದೆ ಅಡಿಯಲ್ಲಿ ಇರುವ ನಿಯಮ ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ .

**1 ನೇ ಆರೋಪಿ ಪರ ವಕೀಲರು, 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿದ್ದರಿಂದ 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಗಿರುತ್ತದೆ.**

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಜೆ.ಎಮ್.ಎಫ್.ಸಿ-1, ಗದಗ.